


ಬಸವಾದಿ ಶರಣರ
ಧರ್ಮ-ಸಾಹಿತ್ಯ-ಸಂಸ್ಕೃತಿಗಳ
ಪ್ರಸಾರಕ್ಕೆ ಮೀಸಲಾಗಿರುವ
ತ್ರೈಮಾಸಿಕ ಪತ್ರಿಕೆ



# ಬಸವ ಬೆಳಗು

## ಸತ್ಯವಿಲ್ಲದವರೊಡನೆ ನುಡಿಯಲಾಗದು

ಸತ್ಯವಿಲ್ಲದವರೊಡನೆ ಸಹಸ್ರಕ್ಕೊಮ್ಮೆ
ನುಡಿಯಲಾಗದು.
ಲಕ್ಷಕ್ಕೊಮ್ಮೆ ನುಡಿಯಲಾಗದು.
ಕೋಟಿಗೊಮ್ಮೆ ನುಡಿಯಲಾಗದು.
ಸುಡಲವಂದಿರೊಡನೆ ಮಾರಿ ಹೋರಲಿ !
ಗುಹೇಶ್ವರಾ, ನಿಮ್ಮ ಶರಣರಲ್ಲದವರೊಡನೆ
ಬಾಯಿದೆರೆಯಲಾಗದು !

—ಜಂಗಮ ವಿಭು ಅಲ್ಲಮ ಪ್ರಭುದೇವರು

ಚಿತ್ತರಗಿ

ಶ್ರೀ ವಿಜಯಮಹಾಂತೇಶ್ವರ ಸಂಸ್ಥಾನಮಠ ಇಲಕಲ್ಲ

ಸಂಪುಟ : ೯ ಅಕ್ಟೋಬರ-ನವೆಂಬರ-ಡಿಸೆಂಬರ ೧೯೯೪ ಸಂಚಿಕೆ : ೧

॥ ಶ್ರೀ ಗುರು ಬಸವಲಿಂಗಾಯ ನಮಃ ॥

# ಬಸವ ಬೆಳಗು

ಶರಣ ಹರ್ಡೇಕರ ಮಂಜಪ್ಪನವರ ಶತಮಾನೋತ್ಸವ ಸಂಸ್ಮರಣೆಯಲ್ಲಿ
ಬಸವ ಪ್ರಣೀತ ಲಿಂಗವಂತಧರ್ಮ-ಸಾಹಿತ್ಯ-ಸಂಸ್ಕೃತಿಗಳ ಪ್ರಸಾರಕ್ಕೆ
ಮೀಸಲಾಗಿರುವ ತ್ರೈಮಾಸಿಕ ಪತ್ರಿಕೆ

ಅರಿದಡೆ ಶರಣ — ಮರೆದಡೆ ಮಾನವ

ನ್ಯಾಯನಿಷ್ಠುರಿ
ಲೋಕವಿರೋಧಿ ಶರಣ

ದಾಕ್ಷಿಣ್ಯಪರ ನಾನಲ್ಲ
ಯಾರಿಗೂ ಅಂಜುವನಲ್ಲ

ಸಂಪುಟ : ೯ ಅಕ್ಟೋಬರ-ನವೆಂಬರ-ಡಿಸೆಂಬರ-೧೯೯೪ ಸಂಚಿಕೆ : ೧

## ಅಲ್ಲಮ ಪ್ರಭುದೇವರ ಸಂದೇಶ

ಕಾಡು ಗಿಚ್ಚೆದ್ದಡೆ ಅಡವಿಯೇ ಗುರಿ.
ನೀರು ಗಿಚ್ಚೆದ್ದಡೆ ಸಮುದ್ರವೇ ಗುರಿ.
ಒಡಲು ಗಿಚ್ಚೆದ್ದಡೆ ತನುವೇ ಗುರಿ.
ಕಾಲಾಗ್ನಿಯೆದ್ದಡೆ ಲೋಕಂಗಳೆ ಗುರಿ.
ಶಿವಶರಣರ ಮನದಲ್ಲಿ ಕೋಪಾಗ್ನಿಯೆದ್ದಡೆ
ನಿಂದಕರೆ ಗುರಿ !
ಗುಹೇಶ್ವರಾ, ನಿಮ್ಮ ಮಾಯದ ಹೊಡೆಗಿಚ್ಚಿಂಗೆ
ನಾನು ಗುರಿಯಲ್ಲ ಕೇಳಾ !

# ಬಸವ ಬೆಳಗಿನೊಳಗು


ಅಲ್ಲಮ ಪ್ರಭುದೇವರ ಸಂದೇಶ ...ವಚನ ವಾಣಿ i

ಆಯುಷ್ಯ ತೀರಿದಲ್ಲದೇ ಮರಣವಿಲ್ಲ ...ಸಂಪಾದಕರು iii

ಮಹಾಲಿಂಗದೊಳು ಬಯಲಾದ ಬಸವ ಚೇತನಗಳು :

ಜಗದ್ಗುರು ಶ್ರೀ ಮಲ್ಲಿಕಾರ್ಜುನ ಮುರುಘರಾಜೇಂದ್ರ ಮಹಾಸ್ವಾಮಿಗಳು v

ಶ್ರೀ ಮ.ನಿ.ಪ್ರ· ಶಿವಬಸವ ಮಹಾಸ್ವಾಮಿಗಳು vi

ಬಸವಾಯತರಾದ ಶ್ರೀ ಸಿದ್ಧಯ್ಯ ಪುರಾಣಿಕರು vii

ಶಿವಾನುಭವ ತರಬೇತಿ ಶಿಬಿರ viii

೧. ಶ್ರೀ ವಿಜಯಮಹಾಂತ ಶಿವಯೋಗಿ ...ಬ. ಗಿ. ಯಲ್ಲಟ್ಟಿ ೧

೨. ನೂತನ ಅಲ್ಲಮನೊಬ್ಬ ಬೆಳಗಲಿ ...ಬಿ. ಎಂ. ಬಿರಾದಾರ ೧೧

೩. ವೀರಶೈವದ ಕೃತ್ರಿಮ ಪ್ರಾಚೀನತೆ ...ವಿ. ವಿ. ಸಂಗಮದ ೧೭

೪. ದಲಿತ ಸಮಾನತೆ ಮಹಾಂತ ಕ್ರಾಂತಿ ...ಎಸ್.ಸಿ. ಬಾಳೇಕುಂದ್ರಿ ೨೩

೫. ಲಿಂಗಾಯತ ಧರ್ಮ-ಚಿಂತನ ...ಶಿವಗಂಗಮ್ಮ ಪಾಟೀಲ ೨೬

೬. ಬಸವ ಚಳುವಳಿ-ಪ್ರತಿಕ್ರಿಯೆ ...ಬಿ. ಎಂ. ಬಿರಾದಾರ ೩೨

೭. ನೂತನ ಶರಣರ ವಚನಗಳು ...ಎಂ. ಬಿ. ಹಾದಿಮನಿ ೩೯

೮. ಅನುಭಾವ ವಾಣಿ ...ಮಹಾಂತ ಶಿವಯೋಗಿಗಳು ೪೪

೯. ನಿರ್ಜಾತೀಯ ಸಮಾಜ ನಿರ್ಮಾಣ ...ಎಚ್.ಜೆ. ಲಕ್ಕಪ್ಪಗೌಡ ೪೯

೧೦. ಮಹಾಕ್ರಾಂತಿಯ ಮತ್ತೊಂದು ಸಾಧನೆ ...ಶಂ. ಗು. ಬಿರಾದಾರ ...ಈಶ್ವರಚಂದ್ರ ಚಿಂತಾಮಣಿ ೫೨

೧೧. ಆಧುನಿಕ ಮಠಗಳ ಮಹಿಮೆ ...ಶ್ರೀಮತಿ ಕೊಡೇಕಲ್ಲ ೫೨

೧೨. ಬಸವಣ್ಣ –ಜಗದಣ್ಣ ...ಟಿ.ಎಸ್. ನಾಗತಾಣ ೫೫

೧೩. ಲಿಂಗಾಯತ ಧರ್ಮದ ಉಳಿವು ...ಬಸವರಾಜ ಮೋದಿ ೫೭

೧೪. ಮನುಕುಲದ ದಿನಕರನೆ ...ಭಾರತಿ ಪಾಟೀಲ ೬೨

೧೫. ಶ್ರೀ ಕ್ಷೇತ್ರ ಉಳವಿ ನಿರ್ಣಯಗಳು ...ಬಿ.ಎಚ್. ದೇಸಾಯಿಸ್ವಾಮಿ ...ವಿ. ವಿ. ಸಂಗಮದ ೬೪

೧೬. ದಲಿತೋದ್ಧಾರ–ದಲಿತರಿಗೆ ಯಾವುದು ಮುಖ್ಯ ? ...ರಾಮವಿಲಾಸ ಪಾಸ್ವಾನ್ ೬೫

೧೭. ಬಸವಣ್ಣನವರು ಯುಗಪ್ರವರ್ತಕರು ...ಸ್ವಾಮಿ ಅಗ್ನಿವೇಶ ೭೧

೧೮. ಶ್ರೀ ಕಾವ್ಯಾನಂದರಿಗೆ ...ಸಂಗಮೇಶ ಹೊಸಮನಿ ೭೭

೧೯. ಸಾದರ ಸ್ವೀಕಾರ ...ಬಸವರಾಜಪ್ಪ ೭೯

೨೦. ಬಸವ ಬೆಳಗು ಚಂದಾದಾರರು ...ಕವ್ಹರ ಪುಟ ೩

## ೧೮. ಶ್ರೀಕಾವ್ಯಾನಂದರಿಗೆ ಶ್ರದ್ಧಾಂಜಲಿ

- 'ಶಿವಕವಿ' ಸಂಗಮೇಶ ಹೊಸಮನಿ, ರಾಮವಾಡಗಿ

ಅನ್ನ, ಹರಣದ ತಾಯಿ,
ಚಿನ್ನ, ಬಾಳಿಗೆ ತಾಯಿ,
ಕಾವ್ಯ ಮನುಕುಲಕೆ ಚೇತನದ ತಾಯಿ,
ಕಾವ್ಯಾನಂದರಿಗೆ ಶಾರದೆಯೇ ತಾಯಿ,
ಅವರ ಅಗಲಿಕೆಗಾಗಿ ಕಂಬನಿಗರೆವವಳು ನಾಡ ತಾಯಿ ॥

ಅಗಲ ಎದೆ, ಎತ್ತರದ ನಿಲವು,
ಹರವಾದ ಹಣೆ, ನೀಟಾದ ನಾಸಿಕ,
ನಕ್ಕು ನಗಿಸುವ ನಗೆ ಮುಖದ ಗೆಲವು,
ಸಿದ್ದಯ್ಯ ಪುರಾಣಿಕರ ಒಲವು–ಚೆಲುವು ॥

ಸರಸ–ಸಂತಸದ ಕಾವ್ಯಾನುರಾಗಿ,
ಕನ್ನಡದ ಸತ್ಪುತ್ರ ಸಾಹಿತ್ಯಯೋಗಿ,
ವಚನ ಕಾವ್ಯ ಕನ್ನಡಕೆ ಸಂದಗೆಲುವು.
ಗದ್ಯ–ಪದ್ಯಗಳಲ್ಲಿ ಸಮಶಾಂತ ನಿಲುವು ॥

ಆಯ್.ಎ.ಎಸ್. ಪಡೆದ ಅಧಿಕಾರಿ,
ಆದರೂ ಸಮಾಜ ಚಿಂತನದ ಪೂಜಾರಿ,
(ಇವನೆಂಥ ಕಾರ್ಯಭಾರಿ ?)
ಅರ್ಧಶತಮಾನಕ್ಕೂ ಹೆಸರಾಂತ ಶರಣ
ಹರಣಕ್ಕೆ ಮರಣವೆನೆ, ಶರಣತ್ವಕ್ಕೆಲ್ಲಿ ಮರಣ ? ॥

'ದ್ಯಾಂಪುರ' ಹಳ್ಳಿಗಾಡಿನಲಿ ಜನನ,
'ಚೆನ್ನಕವಿ' ವಂಶದಲಿ ಚೆಲುವಾಂತಲತೆಯು
ಕರುನಾಡ ಹಂದರಕೆ ಬಿಟ್ಟಂತಹ ಹೃದಯ ಹೂ,
ಬಸವ ಸಮಿತಿಯ ಕಾರ್ಯ ಮರಣ ಪರ್ಯಂತ,
ಸಾಹಿತ್ಯದನುರಾಗ ಬಿಡದ ಪ್ರಶಾಂತ,
ಧನಿಕರಿಗೂ ಧನಿಕ, ಸಾಹಿತ್ಯ ಶರಣ ಆದ ಮಹಾಂತ ॥

ದಿಟ್ಟ ನುಡಿ, ಧಿಟ್ಟ ನಡೆ, ಬೆಟ್ಟದೊಲು ಕಾರ್ಯಭಾರ ಹೊತ್ತು,
ಜೀವನದುದ್ದಕ್ಕೂ ಸಾಗಿದ ಧೀಮಂತಿಕೆಯ ತೊತ್ತು,
ಕೊನೆಗೊಮ್ಮೆ ಲೀನವಾಯಿತು ಆತ್ಮಾ ಮಹಾತ್ಮದಲಿ ಶಾಂತ ॥

ನಾಡಿಗರಿಗೆಲ್ಲ ಚಿರಕಾಲದ ನೆನವು
ಬಿಟ್ಟು ಹೋಗಿಹ ಆಸ್ತಿ, ಕನ್ನಡದ ಆಸ್ತಿ,
ಪುರಾಣಿಕರ ಜೀವನದ ಗೆಲುವು,
ಕನ್ನಡದ ಕುಲಕೋಟಿಗಾಯ್ತು ಚೆಲುವು ॥